# <u>ಹರಿಯೇ ಕುಣಿಯೆನುತ ನರಹರಿಯೆ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 19.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 598.
3. **Note:** Lyrics mentioned here are as per Ref. 1. The wordings in Ref. 2 are almost similar to Ref. 1 with few variations. These wordings are not considered here, as the wordings in Ref. 1 is more apt and error free.

ರಾಗ: ಸಾರಂಗ ತಾಳ: ಆದಿ

ಹರಿಯೇ ಕುಣಿಯೆನುತ ನರಹರಿಯೆ,
ಕುಣಿಯೆಂದು ಕುಣಿಸಿದರಯ್ಯ ॥ ಪ ॥

ಲೋಕವ ತಾಳ್ದನ ಮನೆಯಲಿ ಪುಟ್ಟಿ
ತೂಕದ ನುಡಿಗಳ ಕದ್ದವನ
ನಾಕರಿಸಲು ನಿಜ ಗೋಪ ರೂಪದಿಂದ
ಆಕರಿಸಿದನಾ ಕುಣಿಸಿದರಯ್ಯ ॥ 1 ॥

ಎಡೆಯಿಲ್ಲದೆ ನಡೆವನ ಕೂಡಿರುವನ
ಹಿಡಿತಿಂಬನ ಒಡಹುಟ್ಟಿದನ
ಒಡೆಯನ ಕಂದನ ವೈರಿಯ ಬಂಡಿಯ
ಹೊಡೆದ ಮಹಾತ್ಮನ ಕುಣಿಸಿದರಯ್ಯ ॥ 2 ॥

ಒಣಗಿದ ಮರ ಎಲೆಯಿಲ್ಲದ ಬಳ್ಳಿ
ಬಣತಿಗೆ ಪುಟ್ಟಿದ ವನದಲ್ಲಿ
ಕ್ಷಣ ಮುನ್ನರಿಯದೆ ಅದರ ಆಹಾರಕೆ
ಫಣಿಯ ಮೆಟ್ಟಿದನ ಕುಣಿಸಿದರಯ್ಯ ॥ 3 ॥

ಮಾವನೊಡನೆ ಮನೆಮಾಡಿ ಗೋಕರ್ಣದಿ

ಆ ವುರಗನ ಮೇಲ್ಮಲಗಿದನ
ಮೂವರ ಮೊಲೆಯುಂಡ ಮೂಲೋಕವರಿಯದ
ಮೂವರಣ್ಣನೆಂದು ಕುಣಿಸಿದರಯ್ಯ ॥ 4 ॥

ಗೋಕುಲದೊಳಗಿನ ಗೋಪಿಯರೆಲ್ಲ
ಏಕಾಂತದಿ ತಮ್ಮೊಳು ತಾವು
ಶ್ರೀಕಾಂತನ ನಮ್ಮ ಪುರಂದರ ವಿಠಲನ
ಏಕ ಮೂರುತಿಯೆಂದು ಕುಣಿಸಿದರಯ್ಯ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನನ್ನು ಕುಣಿಸಿದ ಬಣ್ಣನೆ ಈ ಹಾಡಿನಲ್ಲಿ ಇದೆ.

**ಲೋಕವ ತಾಳ್ದನ** = ಆದಿ ಕೂರ್ಮನ

**ಮನೆ** = ಸಮುದ್ರ

**ತೂಕದ ನುಡಿ ಕದ್ದವನ** = ವೇದಗಳನ್ನು ಕದ್ದ ಶಂಖಾಸುರನ

**ನಾಕರಿಸು** = ನಾಶಪಡಿಸು

**ಗೋಪ** = ಮೀನ

**ಆಕರಿಸು** = ಸಂಗ್ರಹಿಸು

**ಎಡೆಯಿಲ್ಲದೆ ನಡೆವನ** = ಎಲ್ಲ ಕಡೆಗೂ ಸಂಚರಿಸುವವನ ಎಂದರೆ ವಾಯು ದೇವರು, ಹನುಮ

**ಕೂಡಿರುವನ** = ಶೇಷನನ್ನು (ವಾಯು ಕಕ್ಷ ೩, ಶೇಷ ಕಕ್ಷ ೫)

**ಹಿಡಿತಿಂಬನ** = ಗರುಡನ

**ಒಡಹುಟ್ಟಿದನ** = ಅರುಣನ

**ಒಡೆಯನ** = ಸೂರ್ಯನ

**ಕಂದನ** = ಕರ್ಣನ

**ವೈರಿಯ** = ಅರ್ಜುನನ

**ಬಂಡಿಯ ಹೊಡೆದ ಮಹಾತ್ಮನ** = ಶ್ರೀ ಕೃಷ್ಣನ

**ಒಣಗಿದ ಮರ ...... ಬಣತಿಗೆ ಪುಟ್ಟಿದ ವನ** = ಕಾಳಿಂಗನ ವಿಷಾದ ಫೂತ್ಕಾರದಿಂದ ಯಮುನೆಯ ದಂಡೆಯ ವನವೆಲ್ಲ ಒಣಗಿ ಹೋಗಿದ್ದಿತು

**ಬಣತಿಗೆ** = ಬಂದಳಿಕೆ (ಬಂದರಿಕೆ)

**ಕ್ಷಣ ಮುನ್ನರಿಯದೆ** = ಏನೂ ವಿಚಾರ ಮಾಡದೆ

**ಆಹಾರಕೆ** = ಹೊಡೆದೋಡಿಸಲಿಕ್ಕೆ

**ಮಾವ** = ಸಮುದ್ರ ರಾಜ

**ಮಾವನೊಡನೆ ಮನೆಮಾಡಿ ಗೋಕರ್ಣದಿ** = ಗೋಕರ್ಣದಲ್ಲಿರುವ ವೆಂಕಟರಮಣನ ದೇವಾಲಯವನ್ನು ಇಲ್ಲಿ ದಾಸರು ಸೂಚಿಸುವಂತೆ ತೋರುತ್ತದೆ.

**ಆ ವುರಗನ ಮೇಲ್ಮಲಗಿದನ** = ವಿಷ್ಣು

**ಮೂವರ ಮೊಲೆಯುಂಡ** = ದೇವಕಿ, ಯಶೋದೆ, ಪೂತನಿಯರ

**ಮೂವರಣ್ಣ** = ಶ್ರೀರಾಮ

**ಏಕಮೂರ್ತಿ** = ಸರ್ವೋತ್ತಮ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, Narasimha, rama, kurma, matsya, loka, mane, huttu, kalla, kalinga, Samudra, gokarna, shesha, uraga, gokula, gopi, Vishnu, hari sarvottama, veda, hanuma, surya, karna, Devaki, yashode, putani,
**Pravachana:** NA
**Explanation:** NA